**ಓ.ಎಸ್.354/2016**

**ಪಿ.ಡಬ್ಲ್ಯೂ:1**

ದಿನಾಂಕಃ11.01.2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಆರ್. ವಕೀಲರಿಂದಃ-</u>**

ಜಮೀನು ಮಾರಾಟ ಮಾಡುತ್ತೇನೆ ಎಂದು ಪ್ರತಿವಾದಿಯು ದಿಃ04.09.2008 ಕ್ಕಿಂತ ಎರಡು ದಿನ ಮುಂಚೆಯೇ ನಮ್ಮ ಮನೆಗೆ ಬಂದಿದ್ದರು. ಆ ಸಂದರ್ಭದಲ್ಲಿ ದಾವಾ ಆಸ್ತಿಯ ಪಹಣಿಯನ್ನು ನೋಡಿರುತ್ತೇನೆ, ಅವುಗಳು ವೀರಭದ್ರಪ್ಪ, ಕಂಬಣ್ಣ, ಓಂಕಾರಪ್ಪ, ಮಲ್ಲುಂಡಪ್ಪ ರವರ ಹೆಸರಿನಲ್ಲಿತ್ತು.

ವೀರಭದ್ರಪ್ಪ ರವರನ್ನು ಹೊರತುಪಡಿಸಿ ಅವರ ಇತರ ಮೂರು ಸಹೋದರರನ್ನು ಜಮೀನು ಮಾರಾಟ ಮಾಡುತ್ತೀರಾ? ಎಂದು ಕೇಳಿದ್ದೀರಾ? ಅಂದರೆ, ಸಾಕ್ಷಿಯು ಆ ಮೂರು ಜನರು ಸಹ ನನಗೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ, ಆ ಪೈಕಿ ಕಂಬಣ್ಣ ರೂ.1,10,000/-ಕ್ಕೆ, ಓಂಕಾರಪ್ಪ ರೂ.67,500/-ಕ್ಕೆ, ಮಲ್ಲುಂಡಪ್ಪನ ಹೆಂಡತಿ ನಂಜಮ್ಮ ರೂ.70,000/-ಕ್ಕೆ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೇನಂಬರ್.123 ಕ್ಕೆ ಸಂಬಂಧಿಸಿದಂತೆ ಪ್ರತಿವಾದಿಯು ಮೂರು ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆ. ಆ ಪೈಕಿ ಒಂದು ಕರಾರು ಪತ್ರ ನಿಪಿ-4 ಆಗಿದ್ದು, ಇನ್ನೆರಡು ಕರಾರು ಪತ್ರಗಳು ಅಂದರೆ 2015 ನೇ ಸಾಲಿನಲ್ಲಿ ರೂ.3,62,500/-ಗಳಿಗೆ ಮತ್ತು 2016 ನೇ ಸಾಲಿನಲ್ಲಿ ರೂ.65,000/-ಗಳಿಗೆ ಕರಾರು ಪತ್ರಗಳನ್ನು ಸರ್ವೇನಂಬರ್.123 ಕ್ಕೆ ಸಂಬಂಧಿಸಿದಂತೆ ಪ್ರತಿವಾದಿಯು ಬರೆದುಕೊಟ್ಟಿರುತ್ತಾರೆ.

ಸರ್ವೇನಂಬರ್.123 ರಲ್ಲಿ ಪ್ರತಿವಾದಿಗೆ ಎಷ್ಟು ಹಿಸ್ಸೆ ಇದೆ ಎಂದು ತೋರಿಸಲು ದಾಖಲೆ ಇಲ್ಲ ಅಂದರೆ ಸಾಕ್ಷಿಯು 14 ಗುಂಟೆ ಹಿಸ್ಸೆ ಇದೆ, ಆ ಬಗ್ಗೆ ದಾಖಲೆ ಇಲ್ಲ ಎಂದು ನುಡಿಯುತ್ತಾರೆ. ಸರ್ವೇನಂಬರ್.123 ಕ್ಕೆ ಸಂಬಂಧಿಸಿದಂತೆ ಚಂದ್ರಶೇಖರರವರು 14 ಗುಂಟೆಗೆ ಸಂಬಂಧಿಸಿದಂತೆ ನನಗೆ ರೂ.70,000/- ಕ್ಕೆ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ. ಸದರಿ ಕರಾರಿನಲ್ಲಿ ನಮೂದಿಸಿರುವ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆ:ಶಿವಣ್ಣನ ಜಮೀನು, ಪಶ್ಚಿಮಕ್ಕೆ:ಗಂಗಣ್ಣನ ಜಮೀನು, ಉತ್ತರಕ್ಕೆ:ಗಂಗಣ್ಣನ ಜಮೀನು ಮತ್ತು ದಕ್ಷಿಣಕ್ಕೆ:ರಸ್ತೆ ಎಂದು ಇರುತ್ತದೆ. ನಿಪಿ-2 ರಲ್ಲಿ ನಮೂದಿಸಿರುವ 14 ಗುಂಟೆ ಪೂರ್ಣ ಆಸ್ತಿಗೆ ಸಂಬಂಧಿಸಿದಂತೆ ಚಂದ್ರಶೇಖರ ಎಂಬುವವರು ನನಗೆ ಕ್ರಯದಕರಾರು ಪತ್ರ ಮಾಡಿಕೊಟ್ಟಿರುತ್ತಾರೆ ಅಂದರೆ ಸರಿ. ಸರ್ವೇನಂಬರ್.123 ರಲ್ಲಿ ಇರುವ ಒಟ್ಟು ಜಮೀನು 14 ಗುಂಟೆ ಮಾತ್ರ ಅಂದರೆ ಸರಿ. ಸದರಿ ಚಂದ್ರಶೇಖರವರು ಬರೆದುಕೊಟ್ಟಿರುವ ಕರಾರು ಪತ್ರ ನನ್ನ ಬಳಿ ಇರುತ್ತದೆ ಅಂದರೆ ಸರಿ. ಸದರಿ ಚಂದ್ರಶೇಖರವರನ್ನು ಕರಾರು ಪತ್ರದಂತೆ ಕ್ರಯಪತ್ರ ಮಾಡಿಕೊಡಿ ಎಂದು ಕೇಳಿರುತ್ತೇನೆ, ಆತನು ಬಂದು ಕ್ರಯಪತ್ರ ಮಾಡಿಕೊಟ್ಟಿರುವುದಿಲ್ಲ. ಸದರಿ ಕರಾರು ಪತ್ರವನ್ನು ಚಂದ್ರಶೇಖರ ರವರು ದಿ:21.01.2013 ರಂದು ಬರೆದುಕೊಟ್ಟಿರಬಹುದು ಸರಿಯಾದ ದಿನಾಂಕ ನೆನಪಿಲ್ಲ.

ಸರ್ವೇನಂಬರ್.123 ರಲ್ಲಿರುವ 14 ಗುಂಟೆ ಜಮೀನಿಗೆ ತಾನೇ ಮಾಲೀಕನೆಂದು ಚಂದ್ರಶೇಖರ ನನಗೆ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾನೆ ಅಂದರೆ ಸರಿ. ಹಾಗಾಗಿ ವೀರಭದ್ರಪ್ಪರವರಿಗಾಗಲೀ, ಕಂಬಣ್ಣರವರಿಗಾಗಲೀ ಕಂಬಣ್ಣನ ಕುಟುಂಬದವರಿಗಾಗಲೀ ಸರ್ವೇನಂಬರ್.123 ರಲ್ಲಿ 14 ಗುಂಟೆ ಜಮೀನಿನ ಮೇಲೆ ಹಕ್ಕು ಅಧಿಕಾರ ಇಲ್ಲ ಅಂದರೆ ಸರಿ. ಈ ದಾವೆಯನ್ನು ಎರಡು ಆಸ್ತಿಗಳಿಗೆ ಸಂಬಂಧಿಸಿದಂತೆ ದಾಖಲಿಸಿರುತ್ತೇನೆ. ಎರಡು ಆಸ್ತಿಗಳಿಗೆ ಸಂಬಂಧಿಸಿದ ಪಹಣಿಗಳನ್ನು ಹಾಜರುಪಡಿಸಿದ್ದೀರಾ? ಅಂದರೆ ಸಾಕ್ಷಿಯು ಸರ್ವೇನಂಬರ್.123 ಕ್ಕೆ ಸಂಬಂಧಿಸಿದ ಪಹಣಿಗಳನ್ನು ಮಾತ್ರ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಸರ್ವೇನಂಬರ್.135/1 ರ ಪಹಣಿಯನ್ನು ಹಾಜರುಪಡಿಸದ ಕಾರಣ ಸರ್ವೇನಂಬರ್.135/1 ರಲ್ಲಿ ಯಾರಿಗೆ ಎಷ್ಟು ವಿಸ್ತೀರ್ಣದ ಆಸ್ತಿ ಇದೆ ಎಂದು ಹೇಳಲಾಗುವುದಿಲ್ಲ ಅಂದರೆ ಸರಿಯಲ್ಲ. ಸರ್ವೇನಂಬರ್.135/1 ರಲ್ಲಿ 1 ಎಕರೆ 34 ಗುಂಟೆ ಆಸ್ತಿ ಇರುತ್ತದೆ. ಸದರಿ ಆಸ್ತಿಯ ಖಾತೆ ಈಗ ಪಾರ್ವತಮ್ಮ, ರುದ್ರಮ್ಮ ಹಾಗೂ ಚಂದ್ರಶೇಖರವರ ಹೆಸರಿನಲ್ಲಿ ಜಂಟಿ ಖಾತೆ ಇರುತ್ತದೆ.

ಸರ್ವೇನಂಬರ್.135/1 ರ ಆಸ್ತಿಗೆ ಸಂಬಂಧಿಸಿದಂತೆ ಕಂಬಣ್ಣ, ಓಂಕಾರಪ್ಪ, ಮಲ್ಲುಂಡಪ್ಪನ ಹೆಂಡತಿ ನಂಜಮ್ಮ ಮತ್ತು ವೀರಭದ್ರಪ್ಪ ರವರು ಪ್ರತ್ಯೇಕವಾದ ಕರಾರು ಪತ್ರಗಳನ್ನು ನನಗೆ ಬರೆದುಕೊಟ್ಟಿರುತ್ತಾರೆ. ಸದರಿ ನಂಜಮ್ಮ ರವರು ಸರ್ವೇನಂಬರ್.135/1 ರಲ್ಲಿ 22 ಗುಂಟೆಗೆ, ಕಂಬಣ್ಣ ರವರು 22 ಗುಂಟೆಗೆ, ಓಂಕಾರಪ್ಪ ರವರು 22 ಗುಂಟೆಗೆ ಮತ್ತು ಪ್ರತಿವಾದಿ ವೀರಭದ್ರಪ್ಪ 8 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಪ್ರತ್ಯೇಕ ಕರಾರು ಪತ್ರಗಳನ್ನು ಬರೆದುಕೊಟ್ಟಿರುತ್ತಾರೆ. ಸಾಕ್ಷಿಯು ಸ್ವತಃ ನುಡಿಯುವುದೇನೆಂದರೆ, ಪ್ರತಿವಾದಿ ವೀರಭದ್ರಪ್ಪ ಸರ್ವೇನಂಬರ್.135/1 ರ ಸಂಪೂರ್ಣ 1 ಎಕರೆ 34 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ನನಗೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೇನಂಬರ್.135/1 ಕ್ಕೆ ಸಂಬಂಧಿಸಿದಂತೆ ಬರೆದುಕೊಟ್ಟಿರುವ ಎಲ್ಲಾ ಕರಾರು ಪತ್ರಗಳು ನನ್ನ ಬಳಿ ಇರುತ್ತವೆ. ಸರ್ವೇನಂಬರ್.135/1 ರ ಸಂಪೂರ್ಣ ಆಸ್ತಿಗೆ ಪ್ರತಿವಾದಿ ವೀರಭದ್ರಪ್ಪ ಮಾಲೀಕರಾಗಿದ್ದರಾ? ಅಂದರೆ ಸಾಕ್ಷಿಯು ಆಗಿದ್ದರು ಎಂದು ನುಡಿಯುತ್ತಾರೆ. ಪ್ರತಿವಾದಿಯು ಯಾವಾಗ ಸದರಿ ಆಸ್ತಿಗೆ ಮಾಲೀಕರಾಗಿದ್ದರು ಅಂದರೆ ಸಾಕ್ಷಿಯು ಕಂಬಣ್ಣ, ಮಲ್ಲುಂಡಪ್ಪ, ಮಲುಂಡಪ್ಪನ ಹೆಂಡತಿ ನಂಜಮ್ಮ ಮತ್ತು ಓಂಕಾರಪ್ಪರವರು ತೀರಿಹೋದ ನಂತರ 2016 ರಲ್ಲಿ ಪ್ರತಿವಾದಿ ಸರ್ವೇನಂ.135/1 ರ ಸಂಪೂರ್ಣ ಆಸ್ತಿಗೆ ಮಾಲೀಕರಾಗಿದ್ದರು ಎಂದು

ನುಡಿಯುತ್ತಾರೆ. ಸದರಿ ಕಂಬಣ್ಣ, ಮಲ್ಲುಂಡಪ್ಪ, ಮಲುಂಡಪ್ಪನ ಹೆಂಡತಿ ನಂಜಮ್ಮ ಮತ್ತು ಓಂಕಾರಪ್ಪರವರಿಗೆ ಮಕ್ಕಳು ಇರುತ್ತಾರೆ, ಅವರು ಮಕ್ಕಳುಗಳೂ ಸಹ ಕರಾರು ಪತ್ರಕ್ಕೆ ಸಹಿ ಮಾಡಿಕೊಟ್ಟಿರುತ್ತಾರೆ.

ಸರ್ವೇನಂಬರ್.135/1 ರ ಸಂಪೂರ್ಣ ಆಸ್ತಿಗೆ ಸಂಪೂರ್ಣ ಆಸ್ತಿಗೆ ಸಂಬಂಧಿಸಿದಂತೆ ಈ ದಾವೆ ದಾಖಲಾದ ನಂತರ ಪ್ರತಿವಾದಿಯು ಒಂದು ಕ್ರಯದ ಕರಾರು ಪತ್ರವನ್ನು 2017 ನೇ ಸಾಲಿನಲ್ಲಿ ನನಗೆ ರೂ.3,62,500/-ಗಳಿಗೆ ಬರೆದುಕೊಟ್ಟಿರುತ್ತಾರೆ. ಸದರಿ ಕರಾರು ಪತ್ರ ಮಾಡಿಕೊಡುವ ಮುಂಚೆ ಪ್ರತಿವಾದಿ ಸ್ವಾಧೀನದಲ್ಲಿದ್ದ, ನಂತರ ನಾನು ಸ್ವಾಧೀನದಲ್ಲಿ ಇರುತ್ತೇನೆ. ದಾವಾ ಅನುಸೂಚಿ.1 ನೇ ಸ್ವತ್ತಿನ ಚಕ್ಕುಬಂದಿ ಈಗ ಮರೆತುಹೋಗಿರುತ್ತದೆ. ನಿಪಿ-4 ಕರಾರು ಪತ್ರಕ್ಕೆ ಬಾಣೂರಿನ ಸಣ್ಣಪ್ಪ ಮತ್ತು ರತ್ನಮ್ಮ ಸಾಕ್ಷಿಗಳಾಗಿ ಸಹಿ ಮಾಡಿರುತ್ತಾರೆ. ನಿಪಿ-4 ಕರಾರು ಪತ್ರವಾಗುವ ಕಾಲಕ್ಕೆ ವಕೀಲರಾದ ಪ್ರಸನ್ನ ರವರು ಪ್ರತಿವಾದಿ, ಪ್ರತಿವಾದಿ ಹೆಂಡತಿ ಮತ್ತು ಸಾಕ್ಷಿಗಳು ಹಾಜರಿದ್ದರು. ನಿಪಿ-4 ಕರಾರು ಪತ್ರ ಬರೆಯಲು ಕಾಗದವನ್ನು ನಾನು ಮತ್ತು ಪ್ರತಿವಾದಿ ಸೇರಿ ಸ್ಟೇಟ್ ಬ್ಯಾಂಕಿನಿಂದ ತಂದಿರುತ್ತೇವೆ. ನಿಪಿ-4 ಕರಾರು ಪತ್ರದಂತೆ ದಾವಾ ಅನುಸೂಚಿ.1 ಮತ್ತು 2 ನೇ ಸ್ವತ್ತುಗಳಿಗೆ ಸಂಬಂಧಿಸಿದಂತೆ ಹಣ ಪಾವತಿ ಮಾಡಿರುತ್ತೇನೆ.

ನಿಪಿ-4 ಕರಾರು ಪತ್ರದಂತೆ ದಾವಾ ಅನಸೂಚಿ.2 ನೇ ಸ್ವತ್ತು 14 ಗುಂಟೆಗೆ ಸಂಬಂಧಿಸಿದಂತೆ ಸಂಪೂರ್ಣ ಹಣವನ್ನು ಪ್ರತಿವಾದಿಗೆ ನೀಡಿರುತ್ತೇನೆ. ಪ್ರತಿವಾದಿ ಮತ್ತು ಚಂದ್ರಶೇಖರ ಅವರಿಂದ ದಾವಾ ಅನುಸೂಚಿ.2 ನೇ ಸ್ವತ್ತಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಕರಾರು ಪತ್ರವನ್ನು ನಾನು ಬರೆಸಿಕೊಂಡಿರುತ್ತೇನೆ. ದಾವಾ ಅನುಸೂಚಿ.2 ನೇ ಸ್ವತ್ತಿಗೆ ಸಂಬಂಧಿಸಿದಂತೆ ವೀರಭದ್ರಪ್ಪ ಆಗಿಲೀ ಚಂದ್ರಶೇಖರಪ್ಪ ಆಗಲೀ ಸಂಪೂರ್ಣ ಮಾಲೀಕರಾಗದ ಕಾರಣ ನನಗೆ ಕ್ರಯದ ಕರಾರು ಪತ್ರಗಳನ್ನು ಬರೆದುಕೊಡುವ ಪ್ರಶ್ನೆಯೇ ಇಲ್ಲ ಅಂದರೆ ಸರಿಯಲ್ಲ. ನಿಪಿ-4 ಕರಾರು ಪತ್ರ ಬರೆಯಲು ದಿಃ04.09.2018 ರಂದು ಕಾಗದವನ್ನು ಬ್ಯಾಂಕಿನಿಂದ ತಂದಿರುತ್ತೇನೆ, ಆ ಬಗ್ಗೆ ಕಾಗದದಲ್ಲಿ ದಿನಾಂಕ ನಮೂದಿಸಿರುವ ಬಗ್ಗೆ ನನಗೆ ಕಾಣಿಸುತ್ತಿಲ್ಲ. ಪ್ರತಿವಾದಿ ಹೆಂಡತಿ ರೇಣುಕ ಅವರು ನಿಪಿ-4 ದಾಖಲೆಗೆ ಒಂದು ಕಡೆ ಸಹಿ ಮಾಡಿರುತ್ತಾರೆ. ನಿಪಿ-4 ನ್ನು ಕೈಯಲ್ಲಿ ಬರೆಯಲಾಗಿದೆಯೋ ಅಥವಾ ಟೈಪ್

ಮಾಡಿಸಲಾಗಿದೆಯೋ ಅಂದರೆ, ಸಾಕ್ಷಿಯು ವಕೀಲರಾದ ಪ್ರಸನ್ನರವರೇ ಪ್ರಿಂಟ್ ಮಾಡಿಸಿ ತಂದಿರುತ್ತಾರೆ, ಆದರೆ ಸರಿಯಾಗಿ ನೆನಪಿಲ್ಲ ಎಂದು ನುಡಿಯುತ್ತಾರೆ. ನಿಪಿ-4 ಪತ್ರವನ್ನು ಪ್ರಿಂಟ್ ಮಾಡುವಾಗ ನಾವುಗಳು ಸಹ ಅಲ್ಲಿಯೇ ಇದ್ದೆವು. ಸದರಿ ಪತ್ರಕ್ಕೆ ನಾನು ಸಹಿ ಮಾಡಿದ್ದೇನೋ ಇಲ್ಲವೋ ಎಂದು ಮರೆತುಹೋಗಿದೆ. ನಿಪಿ-4 ಕರಾರು ಪತ್ರ ಪ್ರಿಂಟ್ ಆದ ನಂತರ ಸದರಿ ಪತ್ರದ ಮೇಲೆ ಕೈ ಬರವಣಿಗೆಯಲ್ಲಿ ಬರೆಯಲಾಗಿದೆಯೋ ಇಲ್ಲವೋ ನನಗೆ ನೆನಪಿಲ್ಲ. ನಿಪಿ-4 ರ ಶೆಡ್ಯೂಲ್ ನಲ್ಲಿ ಕೈ ಬರವಣಿಗೆಯಲ್ಲಿ ಯಾರು ಯಾವತ್ತು ಬರೆದಿದ್ದಾರೆ ಎಂದು ನೆನಪಿಲ್ಲ. ನಿಪಿ-4 ರ ಶೆಡ್ಯೂಲ್ ನಲ್ಲಿ ಕೈ ಬರವಣಿಗೆ ಮಾಡಿರುವ ಜಾಗದಲ್ಲಿ ಸಹಿಗಳನ್ನು ಪಡೆದುಕೊಂಡಿರುವುದಿಲ್ಲ. ನಿಪಿ-4 ಕರಾರು ಪತ್ರಕ್ಕೆ ವಕೀಲರಾದ ಪ್ರಸನ್ನ ರವರು ಸಹಿ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ನಿಪಿ-4 ಕರಾರು ಪತ್ರದಲ್ಲಿ ವಕೀಲರಾದ ಪ್ರಸನ್ನ ರವರ ಸಹಿ ಇರುವುದಿಲ್ಲ. ನಿಪಿ-4 ಕರಾರು ಪತ್ರದ ಕೊನೆಯ ಪುಟದಲ್ಲಿ 'drafted by' ಎಂದು ಬರೆದಿರುವವರು ವಕೀಲರಾದ ಪ್ರಸನ್ನ ಅಲ್ಲ ಅಂದರೆ ಸರಿಯಲ್ಲ. ನಿಪಿ-4 ಕರಾರು ಪತ್ರ ಆಗಿದೆ ಎಂದು ಹೇಳುವ ದಿನಾಂಕಕ್ಕೆ ಪ್ರತಿವಾದಿಗೆ ಪ್ರಾಪ್ತ ವಯಸ್ಕ ಹೆಣ್ಣು ಮಕ್ಕಳು ಇದ್ದರು ಅಂದರೆ ಸರಿ. ನಿಪಿ-4 ಕರಾರು ಪತ್ರದಲ್ಲಿ ನಮೂದಿಸಿರುವ ಆಸ್ತಿಯಲ್ಲಿ ಪ್ರತಿವಾದಿಯ ಹೆಣ್ಣು ಮಕ್ಕಳಿಗೂಸಹ ಹಕ್ಕು ಇತ್ತು ಅಂದರೆ ಸರಿಯಲ್ಲ. ಪ್ರತಿವಾದಿ ವೀರಭದ್ರಪ್ಪ ಮತ್ತು ಅವರ ಹೆಣ್ಣು ಮಕ್ಕಳ ನಡುವೆ ಆಸ್ತಿಗುಳ ವಿಭಾಗ ಆಗಿರುವುದಿಲ್ಲ. ದಾವಾ ಆಸ್ತಿಗಳು ವೀರಭದ್ರಪ್ಪನಿಗೆ ಅವರ ತಂದೆಯಿಂದ ಬಂದ ಆಸ್ತಿಗಳು ಅಂದರೆ ಸರಿ. ನಿಪಿ-4 ಕರಾರು ಪತ್ರವಾಗುವ ಕಾಲಕ್ಕೆ ಪ್ರತಿವಾದಿಯು ದಾವಾ ಆಸ್ತಿಯ ಮಾಲೀಕನಾಗಿರಲಿಲ್ಲ ಮತ್ತು ಸ್ವಾಧೀನದಲ್ಲಿ ಇರಲಿಲ್ಲ ಅಂದರೆ ಸರಿಯಲ್ಲ. ನಿಪಿ-4 ರಲ್ಲಿರುವ ಸಹಿಗಳು ಬೇರೆ ಬೇರೆ ಶಾಯಿಯಲ್ಲಿದ್ದು, ನಾನೇ ಬರೆದುಕೊಂಡಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿಗೆ ಹಣವನ್ನು ವಕೀಲರಾದ ಪ್ರಸನ್ನ ಅವರ ಕಛೇರಿಯಲ್ಲಿ ದಾಖಲೆ ಸಿದ್ಧಪಡಿಸಿ ಸಹಿ ಪಡೆಯುವ ಸಮಯದಲ್ಲಿ ನೀಡಿರುತ್ತೇನೆ. ನಿಪಿ-4 ದಾಖಲೆಯನ್ನು ವಕೀಲರು ಮಾಡಿದ್ದರೆ ಪ್ರತೀಪುಟಕ್ಕೂ ಸಹಿ ಮಾಡಿಸುತ್ತಿದ್ದರು ಅಂದರೆ ನನಗೆ ಗೊತ್ತಿಲ್ಲ. ನನ್ನ ಬಳಿ ಇರುವ ಬೇರೆ ದಾಖಲೆಗಳಿಗೆ ಪ್ರತಿ ಪುಟದಲ್ಲೂ ಸಹಿ ಪಡೆದುಕೊಂಡಿರುತ್ತೇನೆ ಅಂದರೆ ಸರಿ. ನಿಪಿ-4 ರ ದಾಖಲೆಯನ್ನು ನಾನೇ ಸೃಷ್ಠಿಮಾಡಿಕೊಂಡಿರುವ ಕಾರಣ ಪ್ರತಿ ಪುಟಕ್ಕೂ ಸಹಿ ಮಾಡಿಕೊಂಡರೆ ವ್ಯತ್ಯಾಸ ಆಗುತ್ತದೆ ಎಂದು ಪ್ರತೀ ಪುಟಕ್ಕೂ ಸಹಿ ಮಾಡಿಲ್ಲ ಅಂದರೆ ಸರಿಯಲ್ಲ. ನಿಪಿ-4 ಕರಾರು ಪತ್ರವನ್ನು ದಾವೆ ದಾಖಲಿಸುವಾಗ ಹಾಜರುಪಡಿಸಲು ತೊಂದರೆ ಇರಲಿಲ್ಲ ಅಂದರೆ,

ಸಾಕ್ಷಿಯು ವಕೀಲರು ಕೇಳಿಲ್ಲ, ಹಾಗಾಗಿ ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ಈ ಹಿಂದೆ ಪಾಟೀ ಸವಾಲಿನಲ್ಲಿ ಪ್ರಶ್ನೆ ಮಾಡಿದ್ದಕ್ಕೆ ನಿಪಿ-4 ಕರಾರು ಪತ್ರವನ್ನು ಸೃಷ್ಠಿ ಮಾಡಿಕೊಂಡು ಹಾಜರುಪಡಿಸಿದ್ದೇನೆ ಅಂದರೆ ಸರಿಯಲ್ಲ. 2008 ನೇ ಸಾಲಿನಲ್ಲಿ ಇ-ಸ್ಟಾಂಪಿಂಗ್ ಪೇಪರ್ ಗಳಿದ್ದು, ನಿಪಿ-4 ನ್ನು ಸಿದ್ಧಪಡಿಸಿರುವ ಕಾಗದ ಚಲಾವಣೆಯಲ್ಲಿ ಇರಲಿಲ್ಲ ಅಂದರೆ ನನಗೆ ಗೊತ್ತಿಲ್ಲ. ನಿಪಿ-4 ನ್ನು ಯಾರದೋ ಹೆಸರಿನಲ್ಲಿರುವ ಕಾಗದದ ಮೇಲೆ ಬರೆದುಕೊಂಡು ಬಂದು ಹಾಜರುಪಡಿಸಿದ್ದೇನೆ ಅಂದರೆ ಸರಿಯಲ್ಲ. ನಿಪಿ-4 ರ ಕರಾರು ಪತ್ರಕ್ಕೂ ಪ್ರತಿವಾದಿಗು ಸಂಬಂಧ ಇಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಕಬಳಿಸುವ ಸಲುವಾಗಿ ನಿಪಿ-4 ನ್ನು ಸೃಷ್ಠಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.